ಕಥೆ

# ಒಂದು ಕಿರು ಭೇಟಿ



**ಶಾಂತಿ ಕೆ. ಅಪ್ಪಣ್ಣ**
ಕಲೆ: ಎಸ್.ವಿ. ಹೂಗಾರ್



ಅವಳು ನನ್ನನ್ನು ಕಾಣಲು ಬಂದಾಗ ನಾನು ಬರಿಬೆತ್ತಲೆ ಎದೆಯಲ್ಲಿ, ಒಳಚಡ್ಡಿ ಕೂಡ ಹಾಕದೆ, ನೆಪಕ್ಕೆ ಒಂದು ಲುಂಗಿ ಮಾತ್ರವೇ ಸುತ್ತಿಕೊಂಡು ಹೊರಗೆ ಪಡಸಾಲೆಯಲ್ಲಿದ್ದ ಆರಾಮಕುರ್ಚಿಯ ಮೇಲೆ ಆರಾಮಾಗಿ ಒರಗಿದ್ದೆ. ಶಾಂತಿ ಮಕ್ಕಳೊಂದಿಗೆ ತವರಿಗೆ ಹೋಗಿ ನಿಂತವಳು, ವಾಪಸ್ ಬರುವ ಯಾವ ಸೂಚನೆಯನ್ನೂ ತೋರಿಸುತ್ತಿರಲಿಲ್ಲ. ಅವಳು ಹೋಗುವಾಗಲೂ ನನಗೆ ಅಂಥ ದಿಗಿಲೇನೂ ಆಗಿರಲಿಲ್ಲ. ಈಗ ಬಾರದೇ ಉಳಿದಿರುವಾಗಲೂ ಯಾವುದೇ ದಿಗಿಲಾಗುತ್ತಿಲ್ಲವೆಂದು ಅರಿವಾಗುವಾಗ, ಹೀಗೊಂದು ನಿರ್ಮಮತೆ ನನ್ನೊಳಗೆ ಹೇಗೆ ಬಂದಿತೆಂದು ನನಗೇ ಆಶ್ಚರ್ಯವಾಗುತ್ತಿತ್ತು.

ವಿಷಯ ಇದಲ್ಲ, ಅದೇ ಆಗಿನ್ನೂ ಬೆಳಗಿನ ನಾಷ್ಟ ಮುಗಿಸಿ ನಿರುಮ್ಮಳವಾಗಿ ಒರಗಿದ್ದ ನನ್ನ ಮೇಲೆ ಆಕೆ ಅನಾಮತ್ತು ಒಂದು ದೂರು ತಂದಿದ್ದಳು. ಬಂದವಳು ತಾನೇ ಗೇಟು ತೆರೆದುಕೊಂಡು ನಿರಾಳವಾಗಿ ಒಳಬಂದು ಪಡಸಾಲೆಯೇರಿ ನಿಂತಿದ್ದಳು. ಹೀಗೆ ಹೇಳದೆ ಕೇಳದೆ ಒಬ್ಬರ ಮನೆಗೆ ಹೋಗುವುದು ಮಾತ್ರವಲ್ಲದೆ, ಸುಮ್ಮನೆ ನೆಪಕ್ಕಾದರೂ ಒಂದಿಷ್ಟು ಶಿಷ್ಟಾಚಾರ ತೋರುವುದು ಈ ಯಾವುದೊಂದೂ ಅವಳ ರೂಢಿಯಲ್ಲಿರುವಂತೆ ನನಗೆ ಕಾಣಲಿಲ್ಲ. ಅವಳನ್ನು ಕಂಡವನೇ ನಾನು ಅವಸರದಿಂದ ಕಾಲುಗಳನ್ನು ಜೋಡಿಸಿಕೊಂಡು, ಮೂಗಿನೊಳಗೆ ವ್ಯಸ್ಥವಾಗಿದ್ದ ಕೈಬೆರಳುಗಳನ್ನು ತೊಡೆದುಕೊಂಡು, 'ಯಾ, ಯಾರು ನೀವು?' ಎಂದು ತೊದಲಿದ್ದೆ. 'ಸರ್! ಏನಿದು ನಾನು ಗೊತ್ತಿಲ್ವಾ? ನಾನು ಸ್ಸಾರ್ ಇಂದುಮತೀ...' ಹೆಚ್ಚುಕಮ್ಮಿ ನನ್ನದೇ ವಯಸ್ಸಿನ ಅವಳು ಬಾಯ್ತುಂಬಾ ನಗುತ್ತಾ ಕಣ್ಣುಗಳಲ್ಲಿ ಆಶ್ಚರ್ಯ ಹೊಮ್ಮಿಸುತ್ತಾ, ಅತ್ಯಂತ ಪರಿಚಯದ, ಆತ್ಮವಿಶ್ವಾಸದ ನಡೆಯನ್ನು ಪ್ರದರ್ಶಿಸುತ್ತಿರುವಾಗ ಆಕೆ ಯಾರೆಂಬುದು ಸುತರಾಂ ಹೊಳೆಯದೆ ನನಗೆ ತಿಕ್ಕುಮುಕ್ಕಾಡುವಂತಾಯ್ತು.

'ಸ್ಸಾರಿ ಮೇಡಂ, ನಿಜಕ್ಕೂ ನನಗೆ ನಿಮ್ಮ ಗುರ್ತಾಗಲಿಲ್ಲ, ಹಾಗೆ ಇಂದುಮತಿ ಅನ್ನುವ ಹೆಸರಿನಲ್ಲಿ